ಈಗಾಗಲೇ 9 ತಿಂಗಳು ಮುಗಿದು ಹೋಯಿತು ಇನ್ನು ಉಳಿದ 3 ತಿಂಗಳಲ್ಲಿ 4-5 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಸಿ. ಬೈರೇಗೌಡ:- ಫೈನಾನ್ಷಿಯಲ್ ಇಯರ್, ಇನ್ನು ಎರಡುವರೆ ತಿಂಗಳಲ್ಲಿ ಮುಗಿದು ಹೋಗುತ್ತದೆ. ಎಲ್ಲಾ ಸರ್ಕಾರದ ಕೆಲಸಗಳು ಕೊನೆ ಮೂರು ತಿಂಗಳಲ್ಲಿ ಆಗಬೇಕಾಗಿದೆ. ಈಗ ಬಿಲ್ಲುಗಳಿಗೆ ಹಣ ಪಾವತಿ ಮಾಡಿಲ್ಲ ಎಂದರೆ ಯಾವ ಕಂಟ್ರಾಕ್ಟರೂ ಕೆಲಸ ಮಾಡುವುದಿಲ್ಲ. ಬಡ್ಜೆಟ್‌ನಲ್ಲಿ ಇಟ್ಟಿರತಕ್ಕ ಹಣ ಹಾಗೆಯೇ ಇರುತ್ತದೆ, ಎಷ್ಟರ ಮಟ್ಟಿಗೆ ಈ ವರ್ಷದಲ್ಲಿ ಅಭಿವೃದ್ಧಿ ಕೆಲಸಗಳು ಆಗಬೇಕಾಗಿತ್ತು ಆ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ಯಾವುದೂ ಕೂಡ ಆಗುವುದಿಲ್ಲ. ಇವರು ಹದಿನೈದು ದಿವಸದಲ್ಲಿ ಯಾವ ಬಿಲ್ಲನ್ನು ಇಟ್ಟುಕೊಳ್ಳಬಾರದು ಎಂಬ ಮಾತನ್ನು ಹೇಳಿದ್ದಾರೆ. ಈ ತಿಂಗಳು ಕೆಲವು ದಿನಗಳ ಹಿಂದೆ ಕೋಲಾರದಲ್ಲಿ ಸಭೆ ನಡೆಯಿತು. ಆ ಸಭೆಯಲ್ಲಿ ಮಾನ್ಯ ವೆಂಕಟಪ್ಪನವರು ಕೂಡ ಹಾಜರಿದ್ದರು. ಆ ಸಭೆಯಲ್ಲಿ ಅಧಿಕಾರಿಗಳು ಯಾವು ಯಾವುದರ ಮೇಲೆ ಬ್ಯಾನ್ ಇದೆ ಎಂಬುದನ್ನು ಹೇಳಿದರು ಟ್ರಜರಿನಲ್ಲಿ ಪೇಮೆಂಟ್ ಮಾಡುತ್ತಿಲ್ಲ ಎಂದು ನಮ್ಮೆಲ್ಲರ ಎದುರಿಗೆ ಅಧಿಕಾರಿಗಳು ಹೇಳಿದರು ಇದರಿಂದ ಕೆಲಸ ಆಗುತ್ತಾ ಇಲ್ಲ. ಜಿಲ್ಲಾಧಿಕಾರಿಗಳು ಇದ್ದಂಥ ಆ ಸಭೆಯಲ್ಲಿಯೇ ಈ ರೀತಿ ಹೇಳಿದ್ದಾರೆ. ಆದ್ದರಿಂದ ಎಲ್ಲಾ ಅಭಿವೃದ್ಧಿ ಕೆಲಸಗಳು ನಿಂತು ಹೋಗಿವೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಹಾಗೂ ಅಭಿವೃದ್ಧಿ ಕೆಲಸಗಳು ನಡೆಯಲು ಬಡ್ಜೆಟ್‌ನಲ್ಲಿ ಇಟ್ಟಿರತಕ್ಕ ಹಣವನ್ನು ಬಿಡುಗಡೆ ಮಾಡಬೇಕು.

ಗಮನ ಸೆಳೆಯುವ ಸೂಚನೆಗಳು

ಮೈಸೂರಿನ ವಸ್ತು ಪ್ರದರ್ಶನಾಲಯದಲ್ಲಿ ಅಧಿಕಾರಿಗಳ ಬೇಜವಾಬ್ದಾರಿ.

ಶ್ರೀ ಜಿ. ರಾಜುಗೌಡ:- ಮೈಸೂರಿನಲ್ಲಿ ವಸ್ತು ಪ್ರದರ್ಶನಾಲಯದಲ್ಲಿ ಆನೆ ಮೇಲೆ ಸವಾರಿ ಮಾಡಿಸುವ ಮಾವುತನಿಂದ ಹಿಡಿದು ಅನೇಕ ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಬ್ಲೇಸಿಯಸ್ ಡಿಸೋಜ (ಕಾರ್ಮಿಕ ಸಚಿವರು):- ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ದಿನಾಂಕ: 7-1-92ರಂದು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಮಕ್ಕಳ ಮನರಂಜನೆಗಾಗಿ ಡಾಕ್ಟರ್ ಮಾಯಿಗೌಡ ಮತ್ತು ಮಕ್ಕಳು ಹಾಗೂ ಇತರರು ಜಾಯ್ ರೈಡ್ ಮಾಡುತ್ತಿರುವಾಗ ಆನೆಯ ಮೇಲಿನ ಜೀನು ವಾಲಿ ಮಕ್ಕಳನ್ನು ಇಳಿಸಿ ತಾವು ಇಳಿಯಬೇಕೆಂದಿರುವಷ್ಟರಲ್ಲಿ ಆನೆಯು ಡಾ||ಮಾಯಿಗೌಡರವರನ್ನು ಸೊಂಡಲಿನಿಂದ ಸುತ್ತಿ ಪಕ್ಕದಲ್ಲಿದ್ದ ಕಂಬಕ್ಕೆ ಬಡಿದು ಅಪಘಾತವುಂಟಾಯಿತೆಂದು, ಡಾ||ಮಾಯಿಗೌಡರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರಿಗೆ ಚಿಕಿತ್ಸೆಗಾಗಿ ರೂ.50,000-00 ಖರ್ಚಾಗಿದೆ ಎಂದು ಮತ್ತು ಕುಟುಂಬದ ಭವಿಷ್ಯ ಮತ್ತು ಅವರ ಚಿಕಿತ್ಸೆಗಾಗಿ ರೂ. ಎರಡು ಲಕ್ಷ ಪರಿಹಾರ ಧನ ನೀಡಬೇಕೆಂದು ಡಾ||ಮಾಯಿಗೌಡರವರ ಪತ್ನಿ ಶ್ರೀಮತಿ ಸುನಂದಮ್ಮ ತಮ್ಮ ದಿನಾಂಕ: 16-11-92ರಲ್ಲಿ ಕೋರಿಕೊಂಡಿರುತ್ತಾರೆ.

ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳು ಇವರ ದಿನಾಂಕ: 10-12-92ರ ವರದಿ ಪ್ರಕಾರ ಈ ಘಟನೆಯು ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ನಡೆದಿರುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ. ಜಾಯ್ ರೈಡಿಂಗ್ ಸ್ಥಳದಲ್ಲಿ ನೆರೆದಿದ್ದ ಜನರ ಅಕೃತ್ಯದಿಂದ ರೋಷಗೊಂಡ ಆನೆಯು ಮುಂದೆ ನುಗ್ಗಿದಾಗ ವಿದ್ಯುತ್ ಕಂಬಕ್ಕೆ ತಾಗಿ ಅದರಲ್ಲಿದ್ದ ಹ್ಯಾಲೋಜನ್ ಲ್ಯಾಂಪ್ ಒಡೆದಿದ್ದರಿಂದ, ಉಂಟಾದ ಶಬ್ದ ಮತ್ತು ಷಾಕ್‌ಗೆ ಹೆದರಿ ಆನೆಯು ಮುಗ್ಗರಿಸಿದ್ದರಿಂದ

ಜೀನುವಾಲಿದಾಗ ಪ್ರೇಕ್ಷಕರ ಗದ್ದಲದಿಂದ ಆನೆ ಹೆಚ್ಚಾಗಿ ಹೆದರಿದೆ. ಆದ ತತ್‌ಕ್ಷಣ ಮಕ್ಕಳೆಲ್ಲ ಕೆಳಗಿಳಿದರು ಸಹಾ ಡಾ: ಮಾಯಿಗೌಡರಿಗೆ ಇಳಿಯಲು ಸಾಧ್ಯವಾಗದೆ ಕೆಳಗೆ ಹಾರಿದ್ದರಿಂದ ಆಘಾತವಾಗಿದೆ ಮತ್ತು ಆನೆಯು ಸೊಂಡಲಿನಿಂದ ಎತ್ತಿ ಬಿಸಾಡಿದೆ ಎಂದಿರುವುದು ಅನುಮಾನಾಸ್ಪದ.

ಇದೇ ಸರಸ್ವತಿ ಆನೆಯು ಚೆನ್ನಾಗಿ ಪಳಗಿರುವ ಹಾಗೂ ಉತ್ತರ ಅನುಭವಿ ಆನೆಯಾಗಿರುತ್ತದೆ. ದಿನಾಂಕ: 1-10-92ರಿಂದಲೂ ಸಂತಸದ ಸವಾರಿಗೆ ಉಪಯೋಗಿಸಲಾಗುತ್ತಿದ್ದು ಆ ದಿವಸದವರೆಗೆ ಯಾವ ತಕರಾರಿಲ್ಲದೆ ಕೆಲಸ ನಿರ್ವಹಿಸುತ್ತಿತ್ತು. ದಿನಾಂಕ: 7-10-92ರಂದು ಈ ರೀತಿಯಾಗಿ ವರ್ತಿಸಲು ಜನರ ಕುಚೇಷ್ಟೆತನವೇ ಕಾರಣ ಹೊರತು ಇಲಾಖೆಯವರ ನಿರ್ಲಕ್ಷತನದಿಂದಲ್ಲ. ಮೇಲಾಗಿ ಈ ಸಂಬಂಧದಲ್ಲಿ ಇಲಾಖೆಯ ಮಾವುತ ಜೀವದ ಅಪಾಯವನ್ನೂ ಲೆಕ್ಕಿಸದೆ ಕೂಡಲೇ ಆನೆಯನ್ನು ಕಾಲಿಗೆ ಸರಪಣಿ (ಬೇಡಿ) ಹಾಕಿ ತಹಬಂದಿಗೆ ತಂದಿರುವ ಕಾರ್ಯ ಮತ್ತು ಸಮಯ ಪ್ರಜ್ಞೆ ಶ್ಲಾಘನೀಯ.

ಈ ಘಟನೆ ಅರಣ್ಯ ಇಲಾಖೆಯ ಆನೆಯ ಜಾಯ್ ರೈಡಿಗೆ ಸಂಬಂಧಿಸಿರುವುದರಿಂದ ಮಾನವೀಯತೆಯ ದೃಷ್ಟಿಯಿಂದ ನೊಂದಿರುವ ಡಾ: ಮಾಯಿಗೌಡರಿಗೆ ಅವರ ಚಿಕಿತ್ಸೆಯ ವೆಚ್ಚಕ್ಕಾಗಿ ಕೂಡಲೇ ಸೂಕ್ತ ಪರಿಹಾರ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

11-00 A.M

† ಶ್ರೀ ಜಿ. ರಾಜುಗೌಡ:- ಅಧಿಕಾರಿಗಳು ಕೊಟ್ಟ ರತಕ್ಕ ವರದಿಯನ್ನು ಮಾನ್ಯ ಮಂತ್ರಿಗಳು ಓದಿದ್ದಾರೆ. ಬಹುಶಃ ವರದಿಯನ್ನು ಚೆನ್ನಾಗಿ ನಮ್ಮ ಮಂತ್ರಿಗಳು ಓದಿದ್ದರೆ ಏನು ಲೋಪದೋಷವಿತ್ತು ಎನ್ನುವುದನ್ನು ಅವರು ಕಾಣುಬಹುದಿತ್ತು. ಅವರು ಒಂದು ಮಾತು ಹೇಳಿದ್ದಾರೆ. ಈ ಘಟನೆ ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ನಡೆದಿಲ್ಲವೆನ್ನುವ ಒಂದು ಮಾತು ಹೇಳಿದ್ದಾರೆ. ದಯಮಾಡಿ ಅವರ ಹೇಳಿಕೆಯ ಮೇಲಿನ ಸಾಲು ನೋಡಬೇಕು. ಆನೆ ಸವಾರಿ ಮಾಡುತ್ತಿರುವಾಗ ಆನೆಯ ಮೇಲಿನ ಜೀನು ವಾಲಿ ಮಕ್ಕಳು ಬೀಳುತ್ತವೆಂದು ತಿಳಿಸಿದರು. ಆನೆಯ ಮೇಲಿರತಕ್ಕ ಜೀನು ಏತಕ್ಕೆ ಕೆಳಕ್ಕೆ ಬಂತು? ಸರಿಯಾಗಿ ಕಟ್ಟಿದ್ದರೆ ಏಕೆ ಬರುತ್ತಿತ್ತು? ಅದು ಬೇಜವಾಬ್ದಾರಿ ವರ್ತನೆ ಅಲ್ಲವೆ? ದಯಮಾಡಿ ಹೇಳಿ ಸ್ವಾಮಿ. ಎರಡನೆಯ ವಿಷಯ ಪ್ರೇಕ್ಷಕರ ಗದ್ದಲದಿಂದಾಗಿ ಆನೆ ಆ ರೀತಿ ಮಾಡಿದೆಯೆಂದು ಹೇಳಿದ್ದಾರೆ. ಅಂದ ಮೇಲೆ ಅವರೇನು ಮಾಡಿದ್ದಾರೆ? ಪ್ರೇಕ್ಷಕರಿಗೂ ಆನೆ ಸವಾರಿ ಮಾಡುತ್ತಿರುವ ಪ್ರದೇಶಕ್ಕೂ ಪ್ರತ್ಯೇಕತೆ ಇಲ್ಲ. ಎಲ್ಲಾ ಒಟ್ಟೊಟ್ಟಿಗೆ ಮಾಡಿರುವುದು ಅದು ಬೇಜವಾಬ್ದಾರಿ ಅಲ್ಲವೆ? ಅರಣ್ಯ ಇಲಾಖೆಯ ಸಿಬ್ಬಂದಿಯ ಅಜಾಗರೂಕತೆ ಬಗ್ಗೆ ಸಾಕಷ್ಟು ಮಾಹಿತಿಯನ್ನು ನಾನು ತಮಗೆ ಒದಗಿಸುತ್ತೇನೆ. ಏಕೆಂದರೆ ಕುಳಿತುಕೊಳ್ಳತಕ್ಕ ಉಪಕರಣ ಅದು ಜೀನು ಕೆಳಕ್ಕೆ ವಾಲಿದಾಗ ಮಗು ಕೆಳಕ್ಕೆ ಬೀಳುತ್ತದೆ ಎನ್ನುವ ಗಾಬರಿಯಿಂದ ಡಾ।। ಮಾಯಿಗೌಡರು ಕೆಳಗೆ ಇಳಿದ ಸಂದರ್ಭದಲ್ಲಿ ಬಟ್ಟೆ ಸಿಕ್ಕಿಕೊಂಡು ಕೆಳಗೆ ಬಿದ್ದ ಸಂದರ್ಭದಲ್ಲಿ ಆನೆ ಸೊಂಡಲಿನಿಂದ ಸುತ್ತಿ ಕೆಳಕ್ಕೆ ಎಸೆದಾಗ ನಿಮ್ಮ ಮಾವುತ ಎಲ್ಲಿದ್ದ? ತುಂಬಾ ದೂರದಲ್ಲಿದ್ದ. ಆಮೇಲೆ ಬಂದು ಆನೆಯ ಕಾಲಿಗೆ ಸರಪಳಿ ಹಾಕಿದ್ದಾನೆ. ಇದು ಬೇಜವಾಬ್ದಾರಿ ವರ್ತನೆ ಅಲ್ಲವೆ? ನಿಮ್ಮ ಆನೆ ಪಳಗಿಸಿಲ್ಲ. ಯಾವುದೋ ಕಾಡಿನಲ್ಲಿ ಹಿಡಿದುಕೊಂಡು ಕರೆದುಕೊಂಡು ದುಡ್ಡು ಸಂಪಾದನೆ ಮಾಡತಕ್ಕಂತಹ ಒಂದು ಕೆಟ್ಟ ಉದ್ದೇಶದಿಂದ ಈ ತರಹ ಮಾಡಿ ಅವನ ಜೀವನವನ್ನು ತಾವು ಹಾಳು ಮಾಡಿದ್ದೀರಿ. ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಮತ್ತೆ ಬೇಜವಾಬ್ದಾರಿ ಇಲ್ಲ ಎನ್ನತಕ್ಕಂಥಾದ್ದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಇದು ಬೇಜವಾಬ್ದಾರಿ ವರ್ತನೆಯಿಂದ ಈ ಕೆಲಸ ಆಗಿದೆ. ಜೀನ್ ಕೆಳಗೆ ಬಂದಿದ್ದಕ್ಕೆ ತಾನೆ ಇದೆಲ್ಲಾ ನಡೆದಿದ್ದುದು. ಜೀನ್ ಗಟ್ಟಿಯಾಗಿ ಕಟ್ಟಬೇಕಾದವರು ಯಾರು? ಒಂದು, ಆ

ಜನಗಳಿಗೂ ಮತ್ತು ಆನೆ ಸಂಚಾರ ಮಾಡತಕ್ಕಂತಹ ಪ್ರದೇಶಕ್ಕೂ ಪ್ರತ್ಯೇಕತೆ ತಾವು ಏರ್ಪಡಿಸಿದ್ದರೆ ಇದು ಆಗುತ್ತಾ ಇತ್ತೆ? ದಯಮಾಡಿ ಹೇಳಿ ಆ ಮಾವುತ ಪಕ್ಕದಲ್ಲಿ ಇದ್ದಿದ್ದರೆ ಆ ಘಟನೆ ನಡೆಯುತ್ತಾ ಇತ್ತೆ? ಎಲ್ಲಾ ಪೂರ್ಣವಾಗಿರತಕ್ಕಂತಹ ಜವಾಬ್ದಾರಿ ತಮ್ಮದು ಆಗಿದೆ. ಮತ್ತು ಇದರ ಪರಿಣಾಮ ಏನಾಗಿದೆ, ದಯಮಾಡಿ ಕೇಳಿ, ಈಗ ಅರಣ್ಯ ಇಲಾಖೆಯವರು ಈ ದೊಡ್ಡವರನ್ನು ಮತ್ತು ಮಕ್ಕಳನ್ನು ಆನೆ ಮೇಲೆ ಕೂರಿಸಿ ಸವಾರಿ ಮಾಡಿಸತಕ್ಕಂತಹ ಕಾಲದಲ್ಲಿ ಪ್ರತಿಯೊಬ್ಬರಿಂದಲೂ 5 ರೂಪಾಯಿ ಶುಲ್ಕ ದರದಿಂದ, ಮಕ್ಕಳಿಂದ ಮೂರೂವರೆ ರೂಪಾಯಿ ಶುಲ್ಕವನ್ನು ಪಡೆದಿದ್ದಾರೆ. ಹಣ ಪಡೆದು ಇವರು ಈ ಕೆಲಸ ಮಾಡುತ್ತಾ ಇದ್ದರು. ಹಾಗಿರುವಾಗ ಆನೆ ಮೇಲೆ ಕೂರಿಸತಕ್ಕಂಥಾದ್ದು ಕೆಳಗೆ ಇಳಿಸತಕ್ಕಂಥಾದ್ದು, ಆನೆ ಮೇಲೆ ಸವಾರಿ ಮಾಡಿಸತಕ್ಕಂಥಾದ್ದು ಎಲ್ಲಾ ಜವಾಬ್ದಾರಿ ಕೂಡ ಅರಣ್ಯ ಇಲಾಖೆಗೆ ಸೇರಿದ್ದುದು. ಇವರು ಸರಿಯಾಗಿ ವರ್ತನೆ ಮಾಡಿಲ್ಲ ಸ್ವಾಮಿ. ಅವರು 45 ವರ್ಷದ ವೈದ್ಯರು, ಬಹಳ ಹೆಸರಾಂತ ವೈದ್ಯರು. ಕಳೆದ 10 ವರ್ಷಗಳಿಂದಲೂ ಕೂಡ ವೈದ್ಯ ವೃತ್ತಿ ಮಾಡುತ್ತಿದ್ದಾರೆ. ಪ್ರತಿ ತಿಂಗಳೂ ಕೂಡ ವೆಚ್ಚವನ್ನು ಕಳೆದು ಕನಿಷ್ಟ ಪಕ್ಷ 5 ಸಾವಿರ ರೂಪಾಯಿ ಗಳಿಸುತ್ತಿದ್ದರು. ಅಂತಹವರಿಗೆ ಅದು ಆದತಕ್ಷಣ ಮೈಸೂರಿಗೆ ಕೆ.ಆರ್. ಆಸ್ಪತ್ರೆಗೆ ಬಂದರು. ಕೆ.ಆರ್. ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಜೆ.ಎಸ್. ಆಸ್ಪತ್ರೆಗೆ ಬಂದರು, ಅಲ್ಲಿ 15 ದಿವಸ ಔಷಧೋಪಚಾರ ಆಯಿತು. ಅಲ್ಲಿಂದ ಬೆಂಗಳೂರಿನಲ್ಲಿ ಇರತಕ್ಕಂತಹ ಮಣಿಪಾಲ್ ಆಸ್ಪತ್ರೆಗೆ ಹೋದರು. ಸುಮಾರು 2 ತಿಂಗಳ ಕಾಲ ಇದ್ದರು ಅಲ್ಲಿ. ಡಾಕ್ಟರು ಹೇಳಿದರು ಶಾಶ್ವತವಾಗಿ ನಿಮಗೆ ಕಣ್ಣು ಹೋಯಿತು. 2 ಕಣ್ಣಿನ ಬಲ ಇಲ್ಲ ಎಂದು ಹೇಳಿ ಅವರನ್ನು ವಾಪಸ್ಸು ಕಳುಹಿಸಿದ್ದಾರೆ. ಸುಮಾರು ಒಂದು ಲಕ್ಷ ರೂಪಾಯಿ ಕೂಡ ಖರ್ಚಾಗಿದೆ ಸಾಲ ಮಾಡಿ ವೆಚ್ಚ ಮಾಡಿದ್ದಾರೆ ಅವರು. ಇವತ್ತು ಅವರು ಮನೆಯಲ್ಲಿ ಇದ್ದಾರೆ. 4 ಜನ ಸಣ್ಣ ಮಕ್ಕಳು ಇದ್ದಾರೆ ಅವರಿಗೆ. ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಏನು? ಅವರು ಸಂಸಾರದಲ್ಲಿ ಯಾವ ರೀತಿ ನಿರ್ವಹಣೆ ಮಾಡತಕ್ಕಂಥಾದ್ದು. ಅವರು ಯಾವ ರೀತಿ ಅದನ್ನು ಭರಿಸತಕ್ಕಂಥಾದ್ದು. ದಯಮಾಡಿ ನೀವು ಸೂಕ್ತವಾದಂತಹ ಪರಿಹಾರ ಕೊಡಬೇಕು. ನಾನು ಭಿಕ್ಷೆ ಬೇಡುತ್ತಾ ಇಲ್ಲ. ನಿಮ್ಮನ್ನು ಭಿಕ್ಷೆ ಬೇಡುವುದಕ್ಕೆ ನಾನು ನಿಂತಿಲ್ಲ. ದಯಮಾಡಿ ನಿಮ್ಮ ಅಜಾಗರೂಕತೆಯಿಂದ ನಡೆದು ಒಂದು ಸಂಸಾರ ಹಾಳು ಮಾಡಿದಿರಿ. ಸಂಸಾರ ಹೋಯಿತು ಅದು. ಯಾರು ಆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಾರೆ. ಮುಂದೆ ಆ ಸಂಸಾರ ನಿರ್ವಹಣೆ ಮಾಡತಕ್ಕಂಥಾದ್ದು. ಹೇಗೆ ಎಂದು ಹೇಳಬೇಕು. ಮಾನವೀಯ ದೃಷ್ಟಿಯಿಂದ ಹೇಳತಕ್ಕಂತಹ ಮಾತು. ಅದು ಸರಿಯಲ್ಲ. ದಯಮಾಡಿ ಅವರು ಇನ್ನು 30 ವರ್ಷ ಕಾಲ ಬದುಕುತ್ತಾ ಇದ್ದರು. 30 ವರ್ಷದಲ್ಲಿ 18 ಲಕ್ಷ ರೂಪಾಯಿ ಸಂಪಾದನೆ ಸಿಗುತ್ತಿತ್ತು ಅವರಿಗೆ. ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಎಲ್ಲಾದಕ್ಕೂ ಪರಿಗಣಿಸಿ ಸೂಕ್ತವಾದಂತಹವನ್ನು ತಾವು ಮಾಡದೇ ಹೋದರೆ ಸರ್ಕಾರದ ಮೇಲೆ ಮುಂದಿನ ಕ್ರಮ ಜರುಗಿಸಬೇಕಾಗುತ್ತದೆ. ದಯಮಾಡಿ ಅರ್ಥಮಾಡಿಕೊಳ್ಳಬೇಕು. ಸೂಕ್ತವಾದ ಉತ್ತರವನ್ನು ತಮ್ಮಿಂದ ನಾನು ಬಯಸುತ್ತೇನೆ. ತಾವು ದಯಮಾಡಿ ಉತ್ತರ ಕೊಡಬೇಕು. ನಿಮ್ಮ ಅರಣ್ಯ ಅಧಿಕಾರಿಗಳು, ಮಾವುತನಿಂದ ಹಿಡಿದು ಎಲ್ಲರೂ ಬೇಜವಾಬ್ದಾರಿ ಕೆಲಸ ಮಾಡಿರತಕ್ಕಂಥಾದ್ದು. ತಾವು ದಯಮಾಡಿ ಅರ್ಥಮಾಡಿಕೊಳ್ಳಿ, ನನ್ನ ಮನಸ್ಸಿಗೂ ಬಹಳ ನೋವಾಗುತ್ತಿದೆ, ಸಂಕಟ ಆಗುತ್ತದೆ. ಒಂದು ಸಂಸಾರ ಹಾಳು ಮಾಡಿರತಕ್ಕಂಥವರು ನಿಮ್ಮ ಅರಣ್ಯ ಅಧಿಕಾರಿಗಳು. ದಯಮಾಡಿ ಸೂಕ್ತವಾದಂತಹ ರೀತಿಯಲ್ಲಿ ಪರಿಹಾರ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ನಮ್ಮ ರಾಜೂಗೌಡರು ಹೇಳಿದ ಹಾಗೆ ಈ ವಿಷಯದಲ್ಲಿ ಬಹಳ ಕಳಕಳಿ ಇದೆ. ಆದರೆ ಇದು ಒಂದು ಆಕ್ಸಿಡೆಂಟ್. ಇದರಲ್ಲಿ ಆನೆ ಸೊಂಡಿಲಿನಿಂದ ಡಾಕ್ಟರನ್ನು ಹಿಡಿದು ಕಂಬಕ್ಕೆ ಬಡಿಯಿತು ಎಂದು ಹೇಳಿದ್ದುದು ಸರಿಯಲ್ಲ ಎಂದು ನಮ್ಮ ಇಲಾಖೆಯ ಅಧಿಕಾರಿಗಳು ನಮಗೆ ತಿಳಿಸಿದ್ದಾರೆ. ಅವರ

ಕಣ್ಣಿನ ಚಿಕಿತ್ಸೆಗಾಗಿ ಹಣ ಕೊಡುತ್ತೇವೆ. ಇಂತಹ ಇನ್ಸಿಡೆಂಟ್ ಆದರೆ 10 ಸಾವಿರ ರೂಪಾಯಿ ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ಆದರೆ 50 ಸಾವಿರ ರೂಪಾಯಿ ಚಿಕಿತ್ಸೆಗೆ ಖರ್ಚಾಗಿದೆ. ಅದಕ್ಕಿಂತ ಮೇಲೆ ಯಾವುದು ಇದ್ದರೆ ನಾನು ನಮ್ಮ ಮುಖ್ಯಮಂತ್ರಿಯವರಿಗೆ ಹೇಳಿ ಆದಷ್ಟು ಹೆಚ್ಚಿನ ಮೊತ್ತವನ್ನು ಕೊಡುವುದಕ್ಕೆ ಅವರ ಹತ್ತಿರ ವಿನಂತಿಸುತ್ತೇನೆ.

ಶ್ರೀ ಜಿ. ರಾಜುಗೌಡ:– ಈ ಘಟನೆಯನ್ನು ತಾವು ಮಾನವೀಯ ದೃಷ್ಟಿಯಿಂದ, ಅನುಕಂಪ ದೃಷ್ಟಿಯಿಂದ ಕಾನೂನು ರೀತಿ ಪೂರ್ಣ ಚಿಕಿತ್ಸೆಗಾಗಿ ಆಗಿರತಕ್ಕಂತಹ ವೆಚ್ಚ ಸುಮಾರು ಒಂದೂವರೆ ಲಕ್ಷ ರೂಪಾಯಿ, ಮತ್ತೆರಡು ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಏಕೆಂದರೆ ಅವರ ದೃಷ್ಟಿ ಪೂರ್ಣ ಊನವಾಗಿದೆ. ಎಲ್ಲಿಗೂ ಹೋದರೂ ಬರುವುದಿಲ್ಲ. ವಿದೇಶಿ ಆಸ್ಪತ್ರೆಗೆ ಹೋದರೂ ಬರುವುದಿಲ್ಲವೆಂದು ಡಾಕ್ಟರ್ ಹೇಳಿದ್ದಾರೆ. ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನಾವು ಖರ್ಚು ಮಾಡಿದ್ದೇವೆ ಆ ದೃಢೀಕರಣ ಪತ್ರವನ್ನು ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಸಭಾಧ್ಯಕ್ಷರಿಗೆ, ಅವರ ಅವಗಾಹನೆಗಾಗಿ ಕಳುಹಿಸಿಕೊಡುತ್ತಿದ್ದೇನೆ. ಅವರು ಅದನ್ನು ನೋಡಲಿ, ಏನು ಸ್ವಾಮಿ ಸಣ್ಣ ಮಕ್ಕಳು ಇದ್ದಾರೆ, ಅವರ ವಿದ್ಯಾಭ್ಯಾಸದ ಗತಿ ಏನು? ಅವರು ಸಂಸಾರ ಯಾವರೀತಿ ನಿರ್ವಹಣೆ ಮಾಡಬೇಕು. ಸತ್ತಾಗ 50 ಸಾವಿರ, 20 ಸಾವಿರ ಎನ್ನತಕ್ಕಂಥ ಪ್ರಶ್ನೆ ಬರುವುದಿಲ್ಲ ಇಲ್ಲಿ. ಮುಂದೆ ಏನು ಆಗಬಹುದು. ಇನ್ನು 30 ವರ್ಷ ಅವರು ಎಷ್ಟು ಸಂಪಾದನೆ ಮಾಡುತ್ತಾ ಇದ್ದರು? ಈಗ ಆ ಸಂಸಾರ ಹೇಗೆ ಉದ್ಧಾರ ಆಗಬೇಕು, ಹೇಳಿ ಸ್ವಾಮಿ! ಆ ವೆಚ್ಚವನ್ನು ಅವರಿಗೆ ಕೊಟ್ಟು ಪ್ರತಿಯೊಂದು ತಿಂಗಳು ಅವರ ಕುಟುಂಬ ನಿರ್ವಹಣೆಗಾಗಿ ಆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಸಿಕ ವೇತನ 5 ಸಾವಿರ ರೂಪಾಯಿ ಕೊಡಲಿಕ್ಕೆ ತಾವು ತೀರ್ಮಾನ ಮಾಡಬೇಕು. ದಯಮಾಡಿ ತಾವು ಇದರ ಬಗ್ಗೆ ಏನಾದರೂ ಹೇಳಿ ಸ್ವಾಮಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಅಧ್ಯಕ್ಷರೆ, ಈಗ ಅವರ ಪತ್ನಿಯವರು ಶ್ರೀಮತಿ ಸುನಂದಮ್ಮನವರು ಚಿಕಿತ್ಸೆಗಾಗಿ 50 ಸಾವಿರ ಖರ್ಚಾಗಿದೆ ಎಂದು ಹೇಳಿದ್ದಾರೆ.

ಶ್ರೀ ಜಿ. ರಾಜುಗೌಡ:– ಅವರು ಯಾವತ್ತೂ ಪತ್ರ ಬರೆದರೋ ಅವತ್ತಿನ ವೆಚ್ಚ ಸ್ವಾಮಿ ಅದು. ಇವತ್ತಿಂದು ಅಲ್ಲ ಅದು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– ಅದನ್ನು ಕೊಡಿಸುತ್ತೇನೆ. ಇದಕ್ಕಿಂತ ಹೆಚ್ಚು ನಾನು ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿ ಹೆಚ್ಚಿನ ಮೊತ್ತವನ್ನು ಕೊಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಸ್ವಾಮಿ, ಈ ಗಮನ ಸೆಳೆಯುವ ಸೂಚನೆ ಬಹಳ ಪ್ರಮುಖವಾದುದು. ಇದು ಮೀಸಲಾತಿಗೆ ಸಂಬಂಧಪಟ್ಟಿರತಕ್ಕಂಥದ್ದು. ಅನೇಕ ಇಲಾಖೆಗಳಲ್ಲಿ ಸರ್ಕಾರಿ ಆದೇಶಗಳು ಬೇಕಾದಷ್ಟು ಇದ್ದರೂ ಅದನ್ನು ಎಫೆಕ್ಟ್‌ಗೆ ಕೊಡದೆ ಇರುವುದರಿಂದ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ, ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಆಗಬಹುದು.

ಶ್ರೀ ಸಿ. ಬೈರೇಗೌಡ:– ನಿನ್ನೆಯ ದಿವಸ ಮತ್ತು ಮೊನ್ನೆ ದಿವಸ ಮುಖ್ಯಮಂತ್ರಿಗಳಿಂದ ಹೇಳಿಕೆ ಕೊಡಿಸುತ್ತೇವೆಂದು ಹೇಳಿದ್ದೀರಿ;

ಅಧ್ಯಕ್ಷರು:– ಮುಖ್ಯಮಂತ್ರಿಗಳು ಬರಲಿ, ಅವರು ಬಂದ ಮೇಲೆ ಅವರ ಗಮನ ಸೆಳೆಯಿರಿ ಅವರ ಪ್ರತಿಕ್ರಿಯೆಯನ್ನು ನೋಡೋಣ.